IJFANS INTERNATIONAL JOURNAL OF FOOD AND NUTRITIONAL SCIENCES
ISSN PRINT 2319 1775 Online 2320 7876
Research Paper © 2012 IJFANS. All Rights Reserved, UGC CARE Listed ( Group -I) Journal Volume 11, Iss 06, 2022

# ಬಸವಣ್ಣನವರ ವಚನಗಳಲ್ಲಿ ಸಾಮಾಜಿಕ ಪ್ರಜ್ಞೆ

Dr Vijayanand A wagge, Associate professor in Kannada, HRSM college Gangavathi
Saraswati giri, anegundi Road, Gangavathi, Koppal Dist.

ವಚನ ಚಳುವಳಿ ನೇತಾರರಾದ ಮಹಾತ್ಮ ಬಸವಣ್ಣ ಕನ್ನಡ ನಾಡಿನ ವಚನ ಚಳುವಳಿಯ ಸಾಂಸ್ಕೃತಿ, ಸಾಹಿತ್ಯಿಕ ಶಕ್ತಿ ಕೂಡ. ವಿಶಿಷ್ಟಗಳಲ್ಲಿ ವೈಶಿಷ್ಟ್ಯತೆ ತುಂಬಿಕೊಂಡ ವಚನ ಸಾಹಿತ್ಯ ವಿಶ್ವಕ್ಕೆ ಸಾಹಿತ್ಯಿಕ, ಸಾಂಸ್ಕೃತಿಕ ಶ್ರೀಮಂತಿಕೆಯ ಮೌಲ್ಯವನ್ನು ಬಿಂಬಿಸಿದೆ. ಈ ಸಾಹಿತ್ಯಿಕ ಮತ್ತು ಸಾಂಸ್ಕೃತಿ ಕ್ಷೇತ್ರದ ರಾಯಭಾರಿ ಮಹಾತ್ಮ ಬಸವಣ್ಣ ಅವರ ಮುಂದಾಳತ್ವದಲ್ಲಿ ವಿಶ್ವವೇ ಕಂಡರಿಯದ ಮಾನವೀಯ ಮೌಲ್ಯಗಳ ವಿಸ್ಮಯ ನಡೆದಿರುವುದು. ಕನ್ನಡ ಸಾಹಿತ್ಯದ ಸಾಂಸ್ಕೃತಿಯ ಹೊಸ ಮಜಲು ಈ ಕಾಲಘಟ್ಟದಲ್ಲಿಯೇ ಬೆಳೆದು ಬಂದ ಸಂಗತಿ. ಈ ಕಾಲಘಟ್ಟದಲ್ಲಿ ನಡೆದ ಶಿವಶರಣರ ಚಳುವಳಿ ಸಾಮಾಜಿಕ ಮೌಲ್ಯಗಳನ್ನೊಳಗೊಂಡಿದೆ. ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಅಂಟಿಕೊಂಡು ಬಂದ ಜಾತಿ ಪದ್ಧತಿ ಮನುಷ್ಯರ ಸುಖ, ಸಂತೋಷ, ನೆಮ್ಮದಿಯ ಬದುಕಿನ ಬುಡಕ್ಕೆ ಬೆಂಕಿ ಹಚ್ಚಿದೆ. ಜಾತಿ, ಧರ್ಮದ ಹಿನ್ನೆಲೆಯಲ್ಲಿ ಶ್ರೇಷ್ಠ ಕನಿಷ್ಠವೆಂದು ದಿನನಿತ್ಯ ಬಡಿದಾಡಿ ಸಾಯುತ್ತಿವೆ.

ಮನುಷ್ಯ ಹುಟ್ಟುವಾಗಲು ತಾಯಿಯ ಗರ್ಭದಿಂದ ಏನನ್ನು ಹಿಡಿದುಕೊಂಡು ಬರುವುದಿಲ್ಲ; ಸತ್ತಮೇಲು ಏನನ್ನು ಹಿಡಿದುಕೊಂಡು ಹೋಗುವುದಿಲ್ಲ. ಹುಟ್ಟು ಮತ್ತು ಸಾವಿನ ಮಧ್ಯದಲ್ಲಿರುವ ಜೀವನವೇ ಅರ್ಥಮಾಡಿಕೊಂಡಿಲ್ಲ ಮನುಷ್ಯವೆಂಬ ಪ್ರಾಣಿ. ಕೆಲವರು ದುಡಿಯದೇ ಸುಖವಾಗಿ ಕುಳಿತು ತಿನ್ನದಕ್ಕೆ ಮಾಡಿದ ದೊಡ್ಡ ಹುನ್ನಾರ ಮನುಷ್ಯ ತಲೆಯಿಂದ ಹುಟ್ಟಿದ, ಭುಜದಿಂದ ಹುಟ್ಟಿದ, ಮೊಂಕದಿಂದ ಹುಟ್ಟಿದ, ಪಾದದಿಂದ ಹುಟ್ಟಿದರೆಂದು ಕಪೋಲ ಕಲ್ಪಿತ ವಿಚಾರಗಳು ಜನರ ತಲೆಯಲ್ಲಿ ಮನಸ್ಸಿನಲ್ಲಿ ತುಂಬಿ ಅಂದಿನಿಂದ ಇಂದಿನವರೆಗೂ ನಡೆಯುತ್ತಿರುವುದು ವಿಪರ್ಯಾಸ. ಮನುಷ್ಯ ತಲೆಯಿಂದ, ಭುಜದಿಂದ, ಮೊಂಕದಿಂದ, ಪಾದದಿಂದ ಹೇಗೆ ಹುಟ್ಟಲು ಸಾಧ್ಯ? ಇದನ್ನು ನಂಬಿಕೊಂಡು ಬಂದ ಶತಶತಮಾನದ ಜನರು ಏಕೆ? ಆಲೋಚನೆ ಮಾಡುತ್ತಿಲ್ಲ. ಬುದ್ಧ, ಬಸವ, ಅಂಬೇಡ್ಕರ್‌ರಂತ ಮಹಾಪುರುಷ ಹುಟ್ಟಿರದೇ ಇದ್ದರೆ ಈ ನಾಡಿನ ಅಸ್ಪೃಶ್ಯರ ಬದುಕು ಏನಾಗುತ್ತಿತ್ತು. ಹೀಗೆ ಈ ಸಮಾಜದ ಅಸಮಾನತೆಯ ವಿರುದ್ಧ ಹೋರಾಡಿ ಸಮಸಮಾಜ ಕಟ್ಟಲು ಬದುಕಿನ ತುಂಬ ಬಸವಣ್ಣ ಮತ್ತು ಶಿವಶರಣರು ನಿಂತರು. ಅಂದಿನ ಶಿವಶರಣರು ಆ ಸಂದರ್ಭದ ಚರಿತ್ರೆಯ ವ್ಯಕ್ತಿಗಳಾಗಿ ಮಾತ್ರ ಉಳಿಯದೆ ಇಂದಿಗೂ ಜನಮನದಲ್ಲಿ ಉಳಿದುಕೊಂಡು ಬಂದಿದ್ದಾರೆ. ನುಡಿದಂತೆ ನಡೆದ ಶಿವ–ಶರಣರ ಬದುಕು ಮತ್ತು ವ್ಯಕ್ತಿತ್ವ ಅಂದಿಗೂ, ಇಂದಿಗೂ ಹಸಿರಾಗಿದೆ.

ಸಾಮಾಜಿಕ ಪ್ರಜ್ಞೆ ಎಂದರೆ ಸಮಾಜ ಮತ್ತು ಸಮುದಾಯಕ್ಕೆ ಅನ್ವಯಿಸುವಂತ ಎಲ್ಲಾ ಬಗೆಯ ವಿಷಯಗಳು ಧರ್ಮ, ನೀತಿ, ಶಿಕ್ಷಣ, ಸಂಸ್ಕೃತಿ ಆಚಾರ–ವಿಚಾರ, ನಡೆ–ನುಡಿ, ಮೇಲು–ಕೀಳುಗಳೆಲ್ಲ ಸಾಮಾಜಿಕ 'ಪ್ರಜ್ಞೆಗಳು'. ವರ್ಣಾಶ್ರಮ ಧರ್ಮವನ್ನು ಧಿಕ್ಕರಿಸುವ ಮೂಲಕ ಅಂದಿನ ಸಮಾಜ ವ್ಯವಸ್ಥೆಯಲ್ಲಿ ಧಾರ್ಮಿಕ ಸಮಾನತೆಯನ್ನು ತಂದದ್ದು ಬಸವಣ್ಣನವರ ಸಾಮಾಜಿಕ ಪ್ರಜ್ಞೆ, ಸಾವಿರಾರು ವರ್ಷಗಳಿಂದಲೂ ಈ ದೇಶದಲ್ಲಿ ಭಯಾನಕವಾಗಿ ಕಾಡುತ್ತಿರುವ ಜಾತಿ ವ್ಯವಸ್ಥೆಯನ್ನು ಹೋಗಲಾಡಿಸಲು ಸಮಸಮಾಜ ಕಟ್ಟಲು ಬಸವಣ್ಣನವರ ಸಾಮಾಜಿಕ ಪ್ರಜ್ಞೆ ಸಮಗಾರ ಹರಳಯ್ಯನ ಮಗನಾದ ಶೀಲವಂತನಿಗೂ ಮತ್ತು ಬ್ರಾಹ್ಮಣ ಮದುರಸನ ಮಗಳಾದ ಕಲ್ಯಾಣವತಿಗೂ ಅಂತರ್ಜಾತಿ ವಿವಾಹ ಮಾಡುವ ಮೂಲಕ ಜಾತಿ ವಿನಾಶ ಮಾಡಲು ಬಸವಣ್ಣ ಹೊರಟ್ಟಿದ್ದು ಆ ಸಂದರ್ಭ ಮತ್ತು ಕಾಲಘಟ್ಟದಲ್ಲಿ ಸಾಮಾನ್ಯವಾದ ಸಂಗತಿ ಅಲ್ಲವೇ ಅಲ್ಲ. ಅಂತರ್ಜಾತಿ ವಿವಾಹ ಮಾದಿಗರು ಮತ್ತು ಬ್ರಾಹ್ಮಣರ ನಡುವೆ ನಡೆದು ಹೋಹಿತು ನಿಜ ಆದರೆ ಮುಂದೆ ನಡೆದ ಘಟನೆ ಸಂಪ್ರದಾಯವಾದಿ ಬ್ರಾಹ್ಮಣರು ಸಹಿಸದಾಗಿ ಇದಕ್ಕೆ ಕಾರಣರಾದ ಶಿವಶರಣರನ್ನು ಕೊಚ್ಚಿಕೊಲ್ಲಿ ಹೊರತು ಸನಾತನ ಧರ್ಮಕ್ಕೆ ಉಳಿಗಾಲವಿಲ್ಲವೆಂದು ಸಾವಿರಾರು ಶರಣರನ್ನು ಕೊಚ್ಚಿಕೊಲ್ಲಿ ಆನೆಯ ಕಾಲುಗಳಿಗೆ ಶರಣರನ್ನು ಕಟ್ಟಿ ಎಳೆಯಿಸಿ ಕೊಲ್ಲಿದರು. ಈ ಸಂದರ್ಭದಲ್ಲಿ ಶರಣರು ರಚನೆ ಮಾಡಿದ ಅನೇಕ ವಚನಗಳು ಬೆಂಕಿಪಾಲಾದವು. ಇನ್ನು ಕೆಲವು ವಚನಕಾರರು ತಮ್ಮ ಜೀವ ಉಳಿಸಿಕೊಳ್ಳುವ ಜೊತೆಗೆ ವಚನಗಳನ್ನು ರಕ್ಷಿಸಲು ಊರು ಬಿಟ್ಟು ಹೋದರು. ಶತಶತಮಾನಗಳಿಂದಲೂ ಬಂದ ವರ್ಣವ್ಯವಸ್ಥೆಯನ್ನು ಕಾಪಾಡಲು ವೈದಿಕಶಾಹಿ ಬ್ರಾಹ್ಮಣರು ಅಂತರ್ಜಾತಿ ವಿವಾಹಗಳು ನಡೆಯದಂತೆ ನಡೆಸಿದ ಕುತಂತ್ರ.

"ಕಾಯಕವೇ ಕೈಲಾಸ" ತತ್ವದ ಮೂಲಕ ಬಸವಣ್ಣ ಆರ್ಥಿಕ ಸಮಾನತೆಯನ್ನು ತರಲು, ಮೇಲು–ಕೀಳುಗಳನ್ನು ಧಿಕ್ಕರಿಸಿ ಅನುಭವ ಮಂಟಪದ ಮೂಲಕ ಎಲ್ಲಾ ಜಾತಿಯ ವರ್ಣದ ಶಿವಶರಣರನ್ನು ಮುಕ್ತಕಂಠದಿಂದ ಚರ್ಚೆಮಾಡುವಂತೆ ಅವಕಾಶ ನೀಡಿದ್ದು ಬುದ್ಧನ ನಂತರ ಬಸವಣ್ಣನೆಂಬುದು

ಸ  ಖದ್ದರು

ಅಶಕ್ತರಾದ ಜನರಿಗೆ ಅವಕಾಶ ಕೊಟ್ಟಿದ್ದು ಬಸವಣ್ಣನವರ ಸಾಮಾಜಿಕ ಪ್ರಜ್ಞೆ. ವೈದಿಕಶಾಹಿ ವರ್ಣಾಶ್ರಮ ಪದ್ಧತಿಯನ್ನು ವಿಂಡಬಿಸುತ್ತಲೇ ಬಸವಣ್ಣ ಸಮಾಜದಲ್ಲಿ ಪರಿವರ್ತನೆ ತರಲು ಪ್ರಯತ್ನಿಸಿದರು. "ದಯವೇ ಧರ್ಮದ ಮೂಲವಯ್ಯ" ವೆನ್ನುವ ಮೂಲಕ. (ಶಿಷ್ಟ ಸಂಸ್ಕೃತಿಯೊಂದಿಗೆ ಜಪದ ಸಂಸ್ಕೃತಿಯನ್ನು ಸಂಘರ್ಷಕ್ಕಿಳಿಸುತ್ತ ಜನಪರ ಸಂಸ್ಕೃತಿಯನ್ನು ಹುಟ್ಟುಹಾಕಿದ್ದು ಇವೆಲ್ಲಾ ವಚನಚಳುವಳಿಯ ಮೂಲಕ ಬಸವೇಶ್ವರರು ಸಾಧಿಸಿದ ಮಹತ್ವದ ಸಾಧನೆಗಳಾಗುತ್ತವೆ. ಇಂತಹ ಎಲ್ಲಾ ಸಾಧನೆಗಳಲ್ಲಿಯೂ ಅವರಲ್ಲಿರುವ ಸಾಮಾಜಿಕ ಪ್ರಜ್ಞೆ ದಟ್ಟವಾಗಿ ಕೆಲಸ ಮಾಡಿದೆ. ಬಸವರಾಜ ಸಬರದ, ಬಸವೇಶ್ವರ ಮತ್ತು ಪುರುಂದರದಾಸ. ಪು.೧೧೮ ವರ್ಷ ೧೯೯೩.)

"ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ
ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ
ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ
ಇದು ಕಾರಣ ಕೂಡಲ ಸಂಗಮದೇವಾ."

ಮನುಷ್ಯ–ಮನುಷ್ಯರ ನಡುವೆ ವೈದಿಕಶಾಹಿ ವರ್ಣಾಶ್ರಮ ಪದ್ಧತಿಗಳಾದ ಜಾತಿ, ಧರ್ಮಗಳು ಲಕ್ಷ್ಮಣರೇಖೆಯಂತಾಗಿದೆ. ಇದರಿಂದ ಮಾನವ ವರ್ಗ ಮಾನಸಿಕವಾಗಿ ನೆಮ್ಮದಿಯಿಂದ ಹಾಳಾಗಿದಂತು ನಿಜ. "ಕಾಯಕವೇ ಕೈಲಾಸ"ವೆಂದು ನಂಬಿಕೊಂಡು ಬಂದ ಶರಣರ ವೃತ್ತಿಗಳೇ ಜಾತಿಗಳಾಗಿ ನಿರ್ಮಾಗೊಂಡಿದ್ದು ಕಾಲಾನಂತರ ಮತ್ತೆ ಅದೇ ಮುಂದೆ ಜಾತಿಗಳಾಗಿ ನಿಂತಿರುವುದಾಗಿ, ಆ ವೃತ್ತಿಯ ಮೂಲಕ ಸಮಾನತೆ ತರುವುದರ ಮುಖಾಂತರ ವೃತ್ತಿಗೌರವನ್ನು ಹೆಚ್ಚಿಸಿರುವುದು ಕಂಡುಬರುತ್ತದೆ. ಸೆಟ್ಟಿ,ಮಡಿವಾಳ, ಕಮ್ಮಾರ, ಸಾಲಿಗ, ಹಾರುವ ಇಂತಹ ಅನೇಕ ಜಾತಿ ಸೂಚಕಗಳು ಸಹಜವಾಗಿಯೇ ದೂರವಾಗಿರುವಂಥದ್ದು. ಹೀಗೆ ಸಮಾಜದಲ್ಲಿ ಸಮಾನತೆಯನ್ನು ತರುವಲ್ಲಿ ಬಸವಣ್ಣ ಮಾನವೀಯತೆಯನ್ನು ಮೆರೆದಿದ್ದು.

"ಕೊಲ್ಲುವನೇ ಮಾದಿಗ
ಹೊಲಸು ತಿಂಬುವನೇ ಹೊಲೆಯ !
ಕುಲವೇನೊ ಅವಂದಿರ ಕುಲವೇನೋ ?
ಸಕಲಜೀವಾತ್ಮರಿಗೆ ಲೇಸನೆ
ಬಯಸುವ ನಮ್ಮ ಕೂಡಲ ಸಂಗನ ಶರಣರೆ ಕುಲಜರು;

ವೃತ್ತಿಗಳೆ ಜಾತಿಗಳಾಗಿ ಮಾರ್ಪಾಡುಗೊಂಡು ಅಸ್ಪೃಶ್ಯರು ಊರ ಹೊರಗೆ ಬದುಕು ಕಿಟ್ಟಿಕೊಂಡು ಜೀವನ ನಡೆಸಿದ್ದು ವಿಪರ್ಯಾಸ ಸಂಗತಿ. ಇದಕ್ಕೆ ಮೂಲ ಕಾರಣ ವೈದಿಕಶಾಹಿ ವರ್ಣವ್ಯವಸ್ಥೆ. ಈ ವೈದಿಕಶಾಹಿ ವರ್ಣಾಶ್ರಮ ಪದ್ಧತಿಯಿಂದ ದಲಿತರ ಬದುಕಿನಲ್ಲಿ ನಡೆಯಬಾರದ ಘಟನೆಗಳು ನಡೆದಿವೆ. ಇಂದಿಗೂ ಈ ವ್ಯವಸ್ಥೆ ಜಾರಿಯಲ್ಲಿರುವುದು ದುರಂತ. ಸತ್ತ ದನದ ಮಾಂಸ ತಿನ್ನುವರು ಸತ್ತದನ ಎಳೆದು ಹಾಕುವರು ಅಲ್ಲದೆ ಪ್ರಾಣಿಗಳನ್ನು ಕೊಲ್ಲುವರು ಅಶ್ಪೃಶ್ಯರೆಂದು ಬ್ರಾಹ್ಮಣಶಾಹಿ ವರ್ಗ ಹುಸಿ ಕತೆಗಳನ್ನು ಕಟ್ಟಿ ದಲಿತರನ್ನು ದೂರತಳ್ಳಿದ್ದು ಅಮಾನವೀಯವಾದ ಸಂಗತಿ. ಆದರೆ ಬಸವಣ್ಣನವರ ಮೇಲಿನ ವಚನ ಕೂಲಂಕುಶವಾಗಿ ವಿರ್ಮಶಿಸಿದಾಗ ಅದರ ಸ್ಪಷ್ಟತೆ ಗೋಚರವಾಗುತ್ತದೆ. 'ಹಿಂಸೆ ಮಾಡಿ ಕೊಲ್ಲುವವ ಮಾದಿಗ, ಹೊಲಸು ತಿನ್ನುವವ ಹೊಲೆಯನೆಂದು ವ್ಯಾಖ್ಯಾನವನ್ನು ನೀಡಿದ್ದಾರೆ. ವೈದಿಕಶಾಹಿ ಬ್ರಾಹ್ಮಣರ ವರ್ಣಸಂಕೋಲೆ ಒಂದು ಕಡೆ, ಆರ್ಥಿಕ ಸಂಕಷ್ಟದ ಹೊರೆ ಇನ್ನೊಂದು ಕಡೆಗೆ ಬದುಕನ್ನು ಕಟ್ಟಿಕೊಂಡು ನಡೆಸಲು ಸಾಧ್ಯವಾಗದ ಅಸ್ಪೃಶ್ಯವರ್ಗ ಜೀವನಕ್ಕೆ ಆಧಾರವಾದ ಪ್ರಾಣಿ ಮತ್ತು ಹಸುಗಳನ್ನು ಹಿಂಸಿಸಿ ಕೊಲ್ಲುವುದು ಹೇಗೆ ಸಾಧ್ಯ. ಅಸ್ಪೃಶ್ಯರು ತಮ್ಮ ಜೀವನೋಪಾಯಕ್ಕಾಗಿ ಪ್ರಾಣಿ, ಹಸುಗಳನ್ನು ಸಾಕುತ್ತಿದ್ದರು. ಅದರಿಂದ ಸಿಗುವ ಹಾಲು, ಮೊಸರು, ಬೆಣ್ಣೆ, ತುಪ್ಪ ತಿನ್ನುವ ಮೂಲಕ ದೈಹಿಕ ಸಾಮರ್ಥ್ಯವನ್ನು ಗಟ್ಟಿಗೊಳಿಸಿಕೊಳ್ಳಲು ಸಾಧ್ಯವಾಗುತ್ತಿತ್ತು. ಆರ್ಥಿಕತೆಯಿಂದ ಸದೃಢಗೊಂಡ ವಿಪ್ರವರ್ಗ ಹೋಮ–ಹವನ, ಯಜ್ಞಗಳ ರೂಪದಲ್ಲಿ ಪ್ರಾಣಿಗಳನ್ನು ಹಿಂಸಿಸಿ ಬಲಿಯನ್ನು ಕೊಡುತ್ತಿದ್ದರು. ಹಾಗಾಗಿ ಬಸವಣ್ಣ ಕೊಲ್ಲುವನೇ ಮಾದಿಗ, ಹೊಲಸು ತಿನ್ನವವನೇ ಹೊಲೆಯವೆಂಬ ಗೂಡಾರ್ಥದಲ್ಲಿ ಹೇಳಿರುವುದು. ಬಸವಣ್ಣ ಸಮಾಜವನ್ನು ನೋಡುವುದರಲ್ಲಿ ಅವರ ಅಂತರಾತ್ಮದ ಸೂಕ್ಷ್ಮದೃಷ್ಠಿ ಸಮಾನತೆಯನ್ನು ತರುವಲ್ಲಿ ಸಮಸಮಾಜ ನಿರ್ಮಾಣ ಮಾಡುವಲ್ಲಿ ಅವರ ನಿರಂತರ ಕಾಳಜಿ ಮತ್ತು ಹೋರಾಟವಿದೆ.

"ಕಲ್ಲ ನಾಗರ ಕಂಡಡೆ ಹಾಲನೆರೆಯೆಂಬರು
ದಿಟದ ನಾಗರ ಕಂಡಡೆ ಕೊಲ್ಲೆಂಬರಯ್ಯ
ಉಂಬ ಜಂಗಮ ಬಂದರೆ ನಡೆ ಎಂಬರು
ಉಣ್ಣದ ಲಿಂಗಕ್ಕೆ ಬೋನವ ಹಿಡಿವರಯ್ಯ !
ನಮ್ಮ ಕೂಡಲ ಸಂಗಮದೇವನ ಶರಣರ ಕಂಡು ಉದಾಶೀನವ
ಮಾಡಿದಡೆ ಕಲ್ಲು ತಾಗಿದ ಮಿಟ್ಟೆಯಂತಪ್ಪರಯ್ಯ" !

ಚಲನಶೀಲವಲ್ಲದ ನಿರ್ಜವ ವಸ್ತುವಾದ ಕಲ್ಲಿನ ಮೇಲೆ ಕೆತ್ತಿದ ಹಾವಿನ ಚಿತ್ರಕ್ಕೆ ಅಂಧಶ್ರದ್ಧೆ ಉಳ್ಳ ಭಕ್ತರು ಭಕ್ತಿಯಿಂದ ಕಲ್ಲಿನ ವಿಗ್ರಹಕ್ಕೆ ಹಾಲನ್ನು ಚೆಲ್ಲಿ ಭಕ್ತಿಯಿಂದ ಕೊಂಡಾಡುತ್ತಾರೆ. ಆದರೆ ನಿಜವಾದ ಹಾವನ್ನು

ISSN PRINT 2319 1775 Online 2320 7876
ಕ
Research Paper © 2012 IJFANS. All Rights Reserved, UGC CARE Listed ( Group -I) Journal Volume 11, Iss 06, 2022

ಹಾಲು ಸುರಿವ ಭಕ್ತರು ನಿಜವಾದ ಹಾವು ಕಂಡಾಗ ಅದನ್ನು ಹೊಡೆಯಿರಿ, ಬಡೆಯಿರಿ,ಕೊಲ್ಲಿರಿವೆಂದು ಏಕೆ? ಹೇಳುವಿರಿ. ನಿಮ್ಮಲ್ಲಿ ನಿಜವಾದ ಭಕ್ತಿ ಇದ್ದರೆ ನಿಜವಾದ ಹಾವಿಗೆ ಹಾಲು ಉಣಿಸಿ. ಹಸಿವೆಂದು ಬಂದ ಜಂಗಮನಿಗೆ ಉಣ್ಣಲು ಅನ್ನವನ್ನು ಕೊಡದೆ ಉಣ್ಣದ ಲಿಂಗಕ್ಕೆ ನೈವೇದ್ಯ ಕೊಡುವುದು ಹೇಗೆ? ಕಲ್ಲು ಯಾವತ್ತಾದರೂ ಅನ್ನ ತಿಂದಿತ್ತೆ, ಹಾಲು ಕುಡಿದಿತ್ತೆ ವೆಂಬುದು ಬಸವಣ್ಣನವರ ವಾದ.

ಈ ದೇಶದ ನಿರ್ಗತಿಕವಾದ ಬಡವರು ತುತ್ತು ಅನ್ನಕ್ಕಾಗಿ ಹಗಲು–ರಾತ್ರಿ ಬದುಕಿನ ಜೊತೆಗೆ ಹೋರಾಟ ಮಾಡುತ್ತಿದ್ದಾರೆ. ಶ್ರೀಮಂತರು ತಿಂದು ಬೀಸಾಕಿದ ಎಂಜಲು ಅನ್ನಕ್ಕಾಗಿ ನಾಯಿ–ಹಂದಿಗಳ ಜೊತೆಗೆ ಹೋರಾಟ ಮಾಡುವಂಥ ಪ್ರಸಂಗವಿದೆ. ಈ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು ಹಲವಾರು ದಶಕಗಳು ಕಳೆದರೂ ಬಡವಮಾತ್ರ ಉದ್ಧಾರವಾಗಿಲ್ಲ ಅವನ ಆರ್ಥಿಕ ಪರಿಸ್ಥಿತಿ ಸುಧಾರಿಸಿಲ್ಲ. ಆದರೆ ಶ್ರೀಮಂತರು, ಶ್ರೀಮಂತರಾಗಿಯೇ ಉಳಿದಿದ್ದಾರೆ. ಬಹುಶಃ ದಲಿತ ಕವಿ ಸಿದ್ಧಲಿಂಗಯ್ಯ ಇದಕ್ಕೋಸ್ಕರವೇ “ಯಾರಿಗೆ ಬಂತು ಸ್ವಾತಂತ್ರ್ಯ ನಲ್ವತೇಳರ ಸ್ವಾತಂತ್ರ್ಯ” ಎಂಬ ಕವಿತೆ ಕಟ್ಟಿದಂತೆ ಕಾಣಿಸುತ್ತದೆ.

ಕಾಗೆ–ಕೋಳಿಗಳಲ್ಲಿದ್ದ ಪ್ರೀತಿ–ವಿಶ್ವಾಸ–ನಂಬಿಕೆ ಮತ್ತು ಸಹಕಾರ ಮನೋಭಾವನೆ ಬುದ್ಧಿವಂತವೆನಿಸಿಕೊಂಡ ಮನುಷ್ಯ ಪ್ರಾಣಿಯಲ್ಲಿ ಏಕೆ? ಇಲ್ಲ. ಹನ್ನೆರಡನೆ ಶತಮಾನದ ಸಮಾಜ ವ್ಯವಸ್ಥೆಯ ಬಗೆಗೆ, ಅಜ್ಞಾನದ ಮೌಢ್ಯತೆಯಲ್ಲಿ ತುಂಬಿಕೊಂಡಿರುವ ಸಂಪ್ರದಾಯ, ರೂಢಿ, ಆಚಾರ, ವಿಚಾರಗಳ ಬಗ್ಗೆ ವೈಧಿಕಶಾಹಿ ಪಟ್ಟಭದ್ರ, ಹಿತಾಸಕ್ತಿಗಳ ಬಗೆಗೆ ಮಹಾತ್ಮ ಬಸವಣ್ಣ ನಿಷ್ಠುರವಾಗಿ ಖಂಡಿಸಿದ್ದಾರೆ. “ಆರು ಮುನಿದು ನಮ್ಮನೇನ ಮಾಡುವರು? ಊರು ಮುನಿದು ನಮ್ಮನೆಂತು ಮಾಡುವರು?” ಎಂದು ನೇರವಾಗಿ ಖಂಡಿಸಿದ್ದಾರೆ. ಜೊತೆಗೆ ಸಮಾಜದ ವ್ಯವಸ್ಥೆ ಮತ್ತು ಸಮಸಮಾಜದ ಬೆಳವಣಿಗೆಯ ಕಡೆಗೆ ನಿರಂತರವಾಗಿ ಹಿಂಸಾತ್ಮಕ ಹೋರಾಟ ಮಾಡಿದ್ದಾರೆ ಮಹಾತ್ಮ ಬಸವಣ್ಣ. ವರ್ಣಾಶ್ರಮ ಧರ್ಮವನ್ನು ಧಿಕ್ಕರಿಸುವ ಮೂಲಕ ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಧಾರ್ಮಿಕ ಸಮಾನತೆಯನ್ನು ತಂದದ್ದು ಅವರ ಸಾಮಾಜಿಕ ಪ್ರಜ್ಞೆ.

~~~***~~~
~~~